**Shikshan Sanshodhan : Journal of Arts, Humanities and Social Sciences** ISSN(o): 2581-6241
Monthly, Peer-Reviewed, Refereed, Indexed Journal Impact Factor: 7.384
Volume - 8, Issue - 9, September - 2025

DOIs:10.2018/SS/202509010 --:-- Research Paper / Article / Review

# ಗಮಕದ ಹೊಸ ಆಯಾಮಗಳು

**Dr. Jyothi Shankar,**
Associate Professor, Department of Research and Studies in Kannada, Karnataka State Open University, Mysuru, India
Email – gurunatha2025@gmail.com

**ಅಮೂರ್ತ:** *ಕಲೆಗಳು ಭಾರತೀಯ ಪರಂಪರೆಯ ಜೀವಾಳ. ಕಲೆಗಳಲ್ಲಿ ಸಾಹಿತ್ಯ-ಸಂಗೀತವೆರಡನ್ನೂ ಹದವಾಗಿ ಒಳಗೊಂಡ ಗಮಕ ಕಲೆಯು ಜನರಂಜಕವಷ್ಟೇ ಅಲ್ಲದೇ ಮೇಧಾಶಕ್ತಿಯನ್ನೂ ಒರೆಗೆ ಹಚ್ಚುತ್ತದೆ. ಭಾರತದ ಪುರಾತನ ಕಲೆಗಳಲ್ಲಿ ಒಂದಾದ ಈ ಕಲೆಯು ಇಂದು ಬಹುಮಟ್ಟಿಗೆ ಕರ್ನಾಟಕದಲ್ಲಿ ಉಳಿದುಕೊಂಡಿದೆ. ಆದರೆ ಈ ಕಲೆಯ ಭವಿಷ್ಯದ ಬಗ್ಗೆ ಈಗ ಕಾರ್ಯೋನ್ಮುಖರಾಗಬೇಕಾಗಿದೆ. ಪ್ರಾಚೀನ ಕಾವ್ಯಗಳನ್ನು ಉಳಿಸುವ ಮತ್ತು ಜನಮಾನಸಕ್ಕೆ ತಲುಪಿಸುವ ಕಾರ್ಯಗೈಯುವ ಗಮಕ ಕಲೆಯೇ ಇಂದು ಅಪಾಯದಲ್ಲಿದೆಯೆಂದರೆ ಅತಿಶಯೋಕ್ತಿಯಲ್ಲ. ಮುಂದಿನ ಪೀಳಿಗೆಗೆ ಗಮಕ ಕಲೆಯನ್ನು ತಲುಪಿಸುವ ಜವಾಬ್ದಾರಿ ಕೇವಲ ಗಮಕಿಗಳದ್ದು ಮಾತ್ರವಲ್ಲದೇ ಕಾವ್ಯಾಸಕ್ತರದೂ, ಭಾಷಾ ಪ್ರೇಮಿಗಳದ್ದೂ ಮತ್ತು ಮುಂದುವರಿದು ಶ್ರೀಸಾಮಾನ್ಯನದ್ದೂ ಆಗಿದೆ. ಈ ಕಲೆಯ ಶಾಸ್ತ್ರೀಯತೆಯನ್ನು ಮತ್ತು ಅಂತಸ್ಸತ್ವವನ್ನು ಉಳಿಸಿಕೊಂಡು ಸೃಜನಾತ್ಮಕ ತಂತ್ರಗಳ ಮೂಲಕ ಈ ಕಲೆಯನ್ನು ವರ್ಧಿಸಬಹುದಾದ ವಿವಿಧ ಆಯಾಮಗಳನ್ನು ಕುರಿತು ಈ ಲೇಖನವು ವಿಚಾರಮಾಡುತ್ತದೆ.*

**ಪ್ರಮುಖ ಪದಗಳು:** *ಗಮಕಕಲೆ, ಗಮಕರೂಪಕ, ನೃತ್ಯ, ಕಾವ್ಯ*

## 1. ಪೀಠಿಕೆ

**ಕವಿ ವಿಭುದರ ಕಿವಿಯೋಳ್ ಸೂ**
**ಸುವ ನವರಸಮಿಳಿದು ತೀವಿತನುವಂ ಮನವಂ**
**ಕವಿದು ಪೊರಸೂಸಿತೆನೆ ಪೊ**
**ಣ್ಮುವಸುಖಬಾಷ್ಪಂತುಳುಕೆ ಪೇಳ್ವುದು ಕೃತಿಯಂ**

ಭಾರತೀಯ ಪರಂಪರೆಯಲ್ಲಿ ಸಾಹಿತ್ಯ - ಸಂಗೀತ - ನೃತ್ಯದಂತಹ ಕಲೆಗಳಿಗೆ ಬಹು ಪ್ರಾಶಸ್ತ್ಯವಿದೆ. ಇದೇ ಸಾಲಿನಲ್ಲಿ ನಿಲ್ಲುವಂತಹ ಮತ್ತೊಂದು ಅಪರೂಪದ ಕಲೆಯೆಂದರೆ ಗಮಕಕಲೆ. ವಿಶೇಷವಾಗಿ ಕರ್ನಾಟಕದಲ್ಲಂತೂ ಬಹು ಮನ್ನಣೆಯೊಡನೆ ಬೆಳೆದುಬಂದಂತಹ ಕಲೆಯೇ ಗಮಕಕಲೆ. 'ಕವಿ, ಗಮಕಿ, ವಾದಿ, ವಾಗ್ಮಿ' ಎಂದೇ ಪ್ರಸಿದ್ಧವಾದ ಮಾತಲ್ಲಿ, ಕವಿಯ ಕಾವ್ಯ ಸೃಷ್ಟಿಯ ಆನಂತರದ ಸ್ಥಾನದಲ್ಲಿರುವ ಈ ಕಲೆಗೆ ಬಹುಮಾನ್ಯತೆಯಿತ್ತು, ಅರಸರು, ಸಾರ್ವಜನಿಕರು, ಮತ್ತಿತರರು ಗಮಕ ಕಲೆಯನ್ನು ಪೋಷಿಸುತ್ತಾ ಬಂದರು. ಗಮಕವೆಂದರೆ ಕಾವ್ಯಗಾಯನ, ಉಚಿತವಾದ ರಾಗಗಳನ್ನು ಆಯ್ಕೆಮಾಡಿ ಕಾವ್ಯಕ್ಕೆ ಅಳವಡಿಸಿ, ಸಹೃದಯರ ಮನಮುಟ್ಟುವಂತೆ ಗಾಯನ ಮಾಡುವ ಕಲೆಯೇ ಗಮಕ. ಇನ್ನೂ ಮುಂದುವರೆದು ಹೇಳಬಹುದಾದರೆ - ಪದಗಳ ಸಮೂಹವನ್ನು, ವಾಕ್ಯಗಳ ಸಮುಚ್ಚಯವನ್ನು ಮನ ಮುಟ್ಟುವ ರೀತಿಯಲ್ಲಿ ಹೇಳುವ ಇಲ್ಲವೇ ವಾಚನ ಮಾಡುವ ಕಲೆಗೆ ಗಮಕವೆನ್ನಬಹುದು. ಈ ಪದಗುಚ್ಛ ಪದ್ಯವಾಗಿರಬಹುದು, ಗದ್ಯವಾಗಿರಬಹುದು, ಗತಿ - ಗಮ್ಯದೊಡನೆ, ಏರಿಳಿವ ಧ್ವನಿ ವಿಶೇಷಗಳಲ್ಲಿ, ಅರ್ಥಸ್ಫುಟವಾಗುವಂತೆ, ಭಾವ – ಸ್ಪಂದನೆಯೊಡನೆ, ರಸೋತ್ಪತ್ತಿಯಾಗುವ ಶೈಲಿಯಲ್ಲಿ ಹೇಳುವುದೇ ಗಮಕ. ವಿಶೇಷವಾಗಿ ಕಾವ್ಯವನ್ನು – ಕಾವ್ಯದ ಧ್ವನಿಯನ್ನು, ಕವಿಯ ಭಾವಕ್ಕನುಗುಣವಾಗಿ ಹೊರಹೊಮ್ಮಿಸುವವನೇ ಗಮಕಿ. ಇಲ್ಲಿ ರಾಗ - ಲಯ - ಭಾವ - ರಮ್ಯತೆ ಎಲ್ಲವೂ ಇದೆ.

ಗಮಕವೆಂದರೆ ಸಾಹಿತ್ಯ - ಸಂಗೀತ - ರಸ - ಭಾವ ಎಲ್ಲವೂ ಮಿಳಿತವಾಗಿದೆ ಎಂದಮೇಲೂ, ಇಂತಹುದೊಂದು ಕಲಾ ಪ್ರಕಾರ ಅಲ್ಲಲ್ಲಿ ಕರಗಿಹೋಗುತ್ತಿದೆ, ಕಣ್ಮರೆಯಾಗುತ್ತಿದೆ ಎಂದು ಭಾಸವಾಗುತ್ತಿದೆ. ಇದಕ್ಕಿರುವ ಮುಖ್ಯ ಕಾರಣ ಏನು? ಎಂದು ಚಿಂತಿಸುವುದು ಎಷ್ಟು ಅಗತ್ಯವೋ, ಗಮಕ ಕಲೆಯನ್ನು ಮತ್ತೆ ಬೆಳಗಿಸಲು ಆ ಕಲೆಗೆ ನೀಡಬೇಕಾಗಿರುವ ಹೊಸ ಆಯಾಮಗಳನ್ನು ಕುರಿತು ಆಲೋಚಿಸುವ ಕಾರ್ಯವೂ ಆಗಲೇಬೇಕಾಗಿದೆ. ಗಮಕ ಬಹು ನೇರವಾಗಿ ಪ್ರಾಯೋಗಿಕ ಕಲೆಯಾಗಿರುವುದರಿಂದ, ಈ ನಿಟ್ಟಿನಲ್ಲಿ ಈಗಾಗಲೇ ಸಾಕಷ್ಟು ಪ್ರಯೋಗಗಳು ನಡೆದಿದ್ದರೂ, ಮತ್ತಷ್ಟು-ಮಗದಷ್ಟು, ಚೈತನ್ಯಯುತ - ಚಿತ್ತದೊಳಹೋಗುವ ನೂತನ ಆಯಾಮಗಳು ಗಮಕಕ್ಕೆ ಬೇಕಾಗಿದೆ.

## 2. ಗಮಕ ಕಲೆ – ವಿವಿಧ ಸಾಧ್ಯತೆಗಳು

ಮೂಲ ರೀತಿಯ ವಾಚನ ವ್ಯಾಖ್ಯಾನದ ಶಾಸ್ತ್ರೀಯ ಅಭ್ಯಾಸವೇ ಗಮಕಕ್ಕೆ ಭದ್ರವಾದ ಬುನಾದಿ. ಗಟ್ಟಿಯಾದ ಈ ತಳಪಾಯವಿಲ್ಲದೆ ಯಾವ ಸಾಧನೆಯೂ ಸಾಧ್ಯವಿಲ್ಲ. ಪರೀಕ್ಷೆಗೆಂದೋ, ಕಾರ್ಯಕ್ರಮಕ್ಕೆಂದೋ ಮಾಡುವ ವಾಚನ-ವ್ಯಾಖ್ಯಾನದ ಅಭ್ಯಾಸ ವಿಸ್ತೃತವಾಗಿಯೇ ಆಗಬೇಕು. ಕವಿಯ ಇತಿವೃತ್ತ, ಕಾವ್ಯ ಹೊರಬಂದ ಕಾಲಮಾನದ ಸ್ಥಿತಿಗತಿ, ಕಾವ್ಯದ ಭಾಷೆ - ಛಂದಸ್ಸು - ವಸ್ತು ಮುಂತಾದ ಸಂಗತಿಗಳ ಸಮಗ್ರ ಅಧ್ಯಯನವಿದ್ದಾಗಲೇ ವಾಚನವೋ - ವ್ಯಾಖ್ಯಾನವೋ ಸಧೃಢವಾಗಿ ಮೂಡಿಬರಲು ಸಾಧ್ಯವಾಗುತ್ತದೆ. ಇಂತಹ ಗಟ್ಟಿಯಾದ ಜ್ಞಾನವೇ ನವೀನ ಪ್ರಯತ್ನಶೀಲತೆಗೆ ದಾರಿಮಾಡಿಕೊಡುತ್ತದೆ. ೨೧ನೆಯ ಶತಮಾನದ ಹೊಸ್ತಿಲಲ್ಲಿ ಕಾಲಿಡುತ್ತಿರುವ ಈ ಹೊತ್ತು, ಅತ್ಯಂತ ದೊಡ್ಡ ಸಾಂಸ್ಕೃತಿಕ ಸವಾಲುಗಳನ್ನು ನಮ್ಮ ಮುಂದಿಟ್ಟಿದೆ. ಇಂತಹ ಸಮಯದಲ್ಲಿ ಗಮಕವೆನ್ನುವ ಸಂಸ್ಕೃತಿಯನ್ನು - ಕಲೆಯನ್ನು ಮುಂದುವರೆಸುವುದು - ಗಮಕವನ್ನು ಪಠ್ಯವಾಗಿ - ಕಾರ್ಯಕ್ರಮವಾಗಿ ಯುವ ಮನಸುಗಳನ್ನು ತೊಡಗಿಸಿಕೊಳ್ಳುವಂತೆ ಮಾಡುವುದು - ಯುವ ಪೀಳಿಗೆಗೆ ಕಾವ್ಯವನ್ನು ಹತ್ತಿರವಾಗಿಸುವುದು, ತೀರಾ ಸುಲಭದ ಸರಳ ಕೆಲಸವಾಗುಳಿದಿಲ್ಲ. ವಿಶಿಷ್ಟ - ಸಂಸ್ಕಾರಯುತ ಕಲೆಯಾದ ಗಮಕ ಮತ್ತೆ ನಳನಳಿಸುವಂತೆ ಮಾಡಲು ಒಂದಿಷ್ಟು ಹೊಸ ಕಲ್ಪನೆಗಳು – ಸಾಧ್ಯತೆಗಳು ಪ್ರಾಯೋಗಿಕವಾಗಿ ನಡೆಯಬೇಕಾಗಿದೆ. ಏನು ಮಾಡಬೇಕಾಗಿದೆ ಎಂದು ಆಲೋಚಿಸುತ್ತಿದ್ದಾಗ ಕಣ್ಮುಂದೆ ಬಂದದ್ದು ಈ ಕೆಳಕಂಡ ಗಮಕದ ಪ್ರಾಯೋಗಿಕ ಆಯಾಮಗಳು.

**ಗಮಕರೂಪಕ** - ವೇಷವಿಲ್ಲದೆ ಅಥವಾ ವೇಷದೊಡನೆ ಗಮಕ ರೂಪಕವನ್ನು ಪ್ರಸ್ತುತಪಡಿಸುವುದು ಹೊಸದೇನೂ ಅಲ್ಲ. ಹಳೆಯ ರೀತಿಯೇ ಆದರೂ ಕ್ರಿಯಾಶೀಲತೆ - ಸೃಜನಶೀಲತೆ ಇನ್ನೊಂದಷ್ಟು ಹೆಚ್ಚಾಗಿ ರಂಗದ ಮೇಲೆ ಪ್ರಯೋಗವಾಗಬೇಕಾಗಿದೆ. ನುರಿತ ಕಲಾವಿದರು ಪಾತ್ರಗಳೇ ತಾವಾಗುವ ಜೊತೆಯಲ್ಲಿ - ವಾದ್ಯಗಳನ್ನು ಬಳಸಿ, ಅಲ್ಲಲ್ಲಿ ತಾಳಮದ್ದಲೆಯ ರೀತಿಯ ಗದ್ಯದಿಂದೊಡಗೂಡಿದ ಚಮತ್ಕಾರದ ಸಂಭಾಷಣೆಗಳೊಡನೆ ಮೂಡಿಬಂದರೆ, ಕಾವ್ಯ ಎಲ್ಲರಿಗೂ ಇನ್ನಷ್ಟು ಹತ್ತಿರವಾಗುತ್ತದೆ. ಗಮಕರೂಪಕ ಆಧುನಿಕ ಕಾವ್ಯ – ಗದ್ಯ -ಕಾವ್ಯಗಳನ್ನು ಒಳಗೊಂಡರೂ ಒಳಿತೇ. ಸಮಕಾಲೀನ ಘಟನಾವಳಿಗಳನ್ನು ಆಧಾರಗಳೊಡನೆ ವ್ಯಾಖ್ಯಾನದಲ್ಲೋ - ನಿರೂಪಣೆಯಲ್ಲೋ ತಂದರೆ ಮತ್ತಷ್ಟು ರುಚಿಸುತ್ತದೆ. ಪ್ರಾಚೀನ ಕಾವ್ಯಗಳಿಂದ ಮೊದಲ್ಗೊಂಡು, ಇತ್ತೀಚಿನ ಕಾವ್ಯಗಳನ್ನು ರೂಪಕಗಳಲ್ಲಿ ಬಳಸಬೇಕಾಗಿದೆ. ಹೀಗಾದಾಗ ವಿಷಯಾಧಾರಿತ [concept based] ರೂಪಕಗಳು ಮನದೊಳಹೋಗುವ ಎಲ್ಲ ಸಾಧ್ಯತೆಗಳೂ ಇವೆ.

**ನೃತ್ಯ** - ಇನ್ನು ಕಾವ್ಯಗಳನ್ನು ಗಮಕ ವಾಚನದ ಜೊತೆಯಲ್ಲಿ ನೃತ್ಯಕ್ಕೆ ಅಳವಡಿಸಿದರೆ ಅದು ಅತ್ಯಂತ ಆಕರ್ಷಣೀಯ ಮತ್ತು ಸಾರ್ಥಕ ರೀತಿಯ ಪ್ರಸ್ತುತಿಯಾಗುತ್ತದೆ. ಇಲ್ಲಿ ಎದುರಾಗುವ ಸವಾಲು ವಾಚನದ ಎಷ್ಟು ಭಾಗವನ್ನು ಲಯಕ್ಕೆ ಅಳವಡಿಸಬಹುದು? ತೀವ್ರಗತಿಯ ಲಯವಿನ್ಯಾಸವನ್ನು - ಜತಿಗಳನ್ನು ಔಚಿತ್ಯ ಪೂರ್ಣವಾಗಿ ಎಲ್ಲೆಲ್ಲಿ ಅಳವಡಿಸಬೇಕು? ಎನ್ನುವುದೂ ಬಹು ಮುಖ್ಯ ಪ್ರಶ್ನೆಯೇ. ಕಾವ್ಯದ ಛಂದಸ್ಸಿನ ಚೌಕಟ್ಟಿನೊಳಗಿದ್ದು, ಗಮಕ ವಾಚನವೂ ಮುಖ್ಯವಾಗಿದ್ದು, ಏಕತಾನತೆಯಿಂದ ಹೊರಬರಲು ಅವಕಾಶವಿರುವೆಡೆಯಲ್ಲೆಲ್ಲಾ ಲಯವಿನ್ಯಾಸ ಮಾಡಬೇಕು. 'ಏಕವ್ಯಕ್ತಿ' ನೃತ್ಯರೂಪಕ ಬಹು ಸುಂದರವಾಗಿ ಗಮಕಕ್ಕೆ ಹೇಗೆ ಹೊಂದುತ್ತದೆಯೋ, ಹಾಗೆಯೇ ಬಹುಪಾತ್ರಗಳು ನೇರವಾಗಿ ತಕ್ಕ ವಸ್ತ್ರಾಭರಣಗಳೊಡನೆ ರಂಗಪ್ರವೇಶಿಸಿದರೆ ಗಮಕಕ್ಕೆ ಮತ್ತಷ್ಟು ಸೌಂದರ್ಯವೂ ಸೇರಿಕೊಳ್ಳುತ್ತದೆ. ಇದರಿಂದ ಗಮಕಿಗೆ ಸಂಗೀತ - ವಾಚನ - ವ್ಯಾಖ್ಯಾನ - ನೃತ್ಯಾಭಿನಯದ ಮೇಲೆ ಹಿಡಿತ ಸಾಧಿಸುವ ನೈಪುಣ್ಯತೆಯೂ ಹೆಚ್ಚಾಗುತ್ತದೆ.

**ಚಿತ್ರ** - ಗಮಕ ಪ್ರಪಂಚಕ್ಕೂ ಚಿತ್ರಕಲೆಗೂ ಅವಿನಾಭಾವ ಸಂಬAಧವಿದೆ. ಗಮಕದಲ್ಲಿ ಗಮಕಿ ಶಬ್ದದಲ್ಲಿ ಚಿತ್ರ ಬಿಡಿಸಿ, ಕಣ್ಮುಂದೆ ದೃಶ್ಯ ಮೂಡುವಂತೆ ಮಾಡಿಬಿಡುತ್ತಾನೆ. ಇಂತಹ ಚಿತ್ರಕಲೆ ವಾಚನದೊಂದಿಗೇ ಮೂಡಿದರೆ ಕಾವ್ಯ ಮನಸಿಗೆ ಮತ್ತಷ್ಟು ಹತ್ತಿರವಾಗಿ, ವಾಚನ - ವ್ಯಾಖ್ಯಾನಗಳನ್ನು ಸರಿಯಾದ ಕ್ರಮದಲ್ಲಿಯೇ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ. ಕುಂಚವಾಡಿಸುವಾಗ ವಾದ್ಯ ಸಮೂಹ, ನೃತ್ಯಗಾರರು ಮತ್ತಷ್ಟು ಪೂರಕವಾಗಿ ನಿಂತು, ಕಾವ್ಯಭಾವಕ್ಕೆ ಬೇಕಾದ ಎಲ್ಲ ಸ್ಫೂರ್ತಿಯನ್ನೂ ನೀಡಬಹುದು.

**ನಾಟಕ** - ಕಾವ್ಯವೆಂದರೆ ನಾಟಕೀಯ ಪ್ರಸಂಗಗಳ ಬತ್ತದ ಚಿಲುಮೆ. ಬಹುತೇಕ ಕಾವ್ಯಗಳಲ್ಲಿ ಕವಿ ನಾಟಕೀಯ ಪ್ರಸಂಗಗಳನ್ನು ತಂದೇ ತರುತ್ತಾನೆ. ಈ ಸಂಭಾಷಣೆಯ ಸ್ವಾರಸ್ಯ ಬಲುಬೇಗದಲ್ಲಿ ಎಲ್ಲರನ್ನೂ ಮುಟ್ಟುವುದಿಲ್ಲ, ಸಾಹಿತ್ಯದ ಕೇಳ್ಮೆಯಿಂದ, ಅಲ್ಲಿನ ಜಾಣ್ಮೆಯನ್ನರಿಯುವ ಸಹೃದಯರಿಗೆ ಮಾತ್ರ ಕಾವ್ಯದ ನಾಟಕೀಯತೆಯ ಅರಿವಾಗಿ ರಸೋತ್ಪತ್ತಿಯಾಗುತ್ತದೆ. ಗಮಕವಾಚನ ನಡೆಯುವಾಗಲೇ, ಹಿಂಭಾಗದಲ್ಲಿ ಇಲ್ಲ ವೇದಿಕೆಯ ಉಳಿದರ್ಧ ಭಾಗದಲ್ಲಿ ನಾಟಕೀಯ ಅಭಿನಯದ (ನೃತ್ಯವಲ್ಲ) ಆಗು ಹೋಗು ಸೇರಿದರೆ, ಗಮಕ ಮತ್ತಷ್ಟು ಮೆರಗು ಪಡೆಯುತ್ತದೆ. ವಾಚನಕ್ಕೂ ನಾಟಕೀಯತೆಯ ಚುಟುಕು – ವ್ಯಂಗ್ಯ – ರಸ - ಉದ್ದವಲ್ಲದ ಸಾಹಿತ್ಯ ಭಾಗದ ಪದ್ಯ ಇಲ್ಲವೇ ವಾಕ್ಯಗಳನ್ನು ಬಳಸಬೇಕಾಗುತ್ತದಷ್ಟೇ.

**ಜನಪದ** - ಗಮಕವಾಚನಕ್ಕೆ ಒಂದಷ್ಟು ಜನಪದದ ಸೊಗಡನ್ನು ಅಲ್ಲಲ್ಲಿ ಬಳಸಬೇಕಾಗಿದೆ. ಕಾವ್ಯ ಶಿಷ್ಟ - ಭಾಷೆಯಿಂದ ಬಂದಿದೆಯಾದರೂ, ಎಲ್ಲದಕ್ಕೆ ಮೂಲ ಜನಪದ ಸಾಹಿತ್ಯ ಎನ್ನುವುದನ್ನು ಮರೆಯಲಾಗದು. ಅಲ್ಲಿರುವ ಕಥನ - ಖಂಡ - ಕಾವ್ಯಗಳ ಪರಂಪರೆ ಬಹು ದೊಡ್ಡದಿದೆ. ವಾಚನ - ವ್ಯಾಖ್ಯಾನಗಳು ಈ ನಿಟ್ಟಿನಲ್ಲಿ ದೃಷ್ಟಿ ಹರಿಸಿದರೆ ಮತ್ತಷ್ಟು ಪ್ರಯೋಜನವಾಗುತ್ತದೆ. ಇದರ ಜೊತೆಯಲ್ಲೇ ಮಾಡಬಹುದಾದ, ನೀಡಬಹುದಾದ ಪರಿಕಲ್ಪನೆಯೆಂದರೆ ಒಂದೇ ವೇದಿಕೆಯಲ್ಲಿ, ಒಂದೇ ವಿಷಯವನ್ನು ಕುರಿತು ಬಂದಿರುವ ಕಾವ್ಯಗಳನ್ನು ಒಟ್ಟಿಗೆ ವಾಚನ ಮಾಡಿ ವ್ಯಾಖ್ಯಾನ ಮಾಡುವಂತಹುದು. ಉದಾ: ದ್ರೌಪದಿಗೆ ಅಕ್ಷಯ ವಸ್ತ್ರ ಪ್ರದಾನ - ವ್ಯಾಸ ಭಾರತದ ಮೂಲ ಶ್ಲೋಕ, ಪಂಪಭಾರತ, ಕುಮಾರವ್ಯಾಸ ಭಾರತ, ಜನಪದ ಮಹಾಭಾರತ. ಮೂವರು ಗಮಕಿಗಳು ಪ್ರಸ್ತುತಪಡಿಸುವ ಒಂದೇ ಭಾಗಕ್ಕೆ ಕ್ರೋಢೀಕರಿಸಿದ ವ್ಯಾಖ್ಯಾನವಿದ್ದರೆ ಅದರ ಸೊಗಸೆ ಬೇರೆ.

ಕನ್ನಡದ ಸಾರಸ್ವತ ಲೋಕದಲ್ಲಿರುವ ತುಲನಾತ್ಮಕ ವಿಶ್ಲೇಷಣೆಯನ್ನು ವ್ಯಾಖ್ಯಾನದಲ್ಲಿ ಮಾಡುವಂತೆಯೇ ವಾಚನದಲ್ಲೂ ತಂದರೆ, ಕಾವ್ಯದ ಅರಿವಿನ ದೃಷ್ಟಿಯಿಂದ ಬಹು ಪ್ರಯೋಜನಕಾರಿ ಉದಾ ಕರ್ಣವಧೆ - ಪಂಪ - ರನ್ನ-ಕುಮಾರವ್ಯಾಸ ಇತ್ಯಾದಿ. ಕವಿಗಳು ಹೇಗೆ ಒಂದು ಭಾಗವನ್ನು ಚಿತ್ರಿಸಬಲ್ಲರು ಎನ್ನುವುದರ ಜೊತೆಗೆ ವಾಚನದ ಪ್ರಕಾರಗಳ ವ್ಯತ್ಯಾಸವು – ಅಂದರೆ - ಚಂಪೂ - ಷಟ್ಪದಿ - ಇತ್ಯಾದಿ ಬದಲಾಗಿ ಒಂದೇ ಸಮಯದಲ್ಲಿ ಮೂಡಿ ಬರುವುದು, ಕಿವಿ, ಮನಸ್ಸು ಎರಡಕ್ಕೂ ಹಿತವೇ. ಒಂದಷ್ಟು ಪರಿಶ್ರಮವಿದ್ದರೆ ಇಂಥ ಕಾರ್ಯಕ್ರಮಗಳು ಯಶಸ್ಸನ್ನು ಕಂಡೇ ಕಾಣುತ್ತವೆ.

**ಹರಿದಾಸ ಸಾಹಿತ್ಯ** ಕನ್ನಡದ ಅಪರೂಪದ ಸಾಹಿತ್ಯ, ಅಲ್ಲಿರುವ ಕೀರ್ತನೆಗಳು ಎಲ್ಲರಿಗೂ ಪರಿಚಿತವೇ ಆದರೆ (ಅಪರೂಪವೆನಿಸುವ) ವಿಶೇಷ ಕಥಾ ಪ್ರಸ್ತಾಪವಿರುವ ಉಗಾಭೋಗ, ಹಲವು ಚರಣಗಳ ಕೀರ್ತನೆಗಳನ್ನು ಗಮಕ ರೂಪಕ್ಕೆ ತರಬಹುದು. ಈ ಪ್ರಯತ್ನ ಸಂಸ್ಕೃತಿ, ಸಾಹಿತ್ಯ ಎರಡರ ಪ್ರಸರಣಕ್ಕೂ ಹೊಸ ತಿರುವನ್ನೇ ಕೊಡಬಲ್ಲುದು. ಎಲ್ಲೂ ಉಲ್ಲೇಖವಿರದ, ಬಾಯಿಂದ ಬಾಯಿಗೆ ಹರಿದು ಬಂದು, ಹರಿದಾಸ ಸಾಹಿತ್ಯದ ಹರಳುಗಟ್ಟಿರುವ ಕಥನ, ಈ ಮೂಲಕವಾದರೂ ಬೆಳಕಿಗೆ ಬರಬಹುದು. ಯಕ್ಷಗಾನ ಪ್ರಸಂಗಗಳಲ್ಲಿರುವ ವಸ್ತುವನ್ನೂ ಈ ದೃಷ್ಟಿಕೋನದಿಂದ ನೋಡಬಹುದು.

ಗಮಕ ವಾಚನವನ್ನು ಒಂದು ಪ್ರಸಂಗಕ್ಕೋ ಸಂಧಿಗೋ, ಸೀಮಿತವಾಗಿರಿಸದೆ, ಕಾವ್ಯಗಳನ್ನು ಬಳಸಿಕೊಂಡು ಪಾತ್ರ, ಇಲ್ಲವೇ ಪ್ರಮುಖ ಘಟನೆಗಳ ಪೂರ್ಣ ಪರಿಚಯ ಮಾಡಿಕೊಡುವಂತಹ ಪ್ರಯತ್ನ ಬೇಕಿದೆ. ಇಂತಹ ಕಡೆ ಮೂಲ ವಾಚನ - ವ್ಯಾಖ್ಯಾನದ ಮಾದರಿಯನ್ನು ಬಳಸಬೇಕು. ಇದು ಹೊಸ ಶ್ರೋತೃಗಳಿಗೆ ಯುವ ಜನತೆಗೆ ದಾರಿ ದೀವಿಗೆಯಾಗಬಲ್ಲ ವಿಶಿಷ್ಟ ಆಯಾಮವಾಗುವ ಎಲ್ಲ ಸಾಧ್ಯತೆಗಳಿವೆ.

ಗಮಕ ರೂಪಕಗಳನ್ನು ಬರಿಯ ಕಥಾಪ್ರಸಂಗಗಳಿಗಷ್ಟೇ ಮೀಸಲಿಡುವುದಕ್ಕಿಂತ, ತಾತ್ವಿಕ ಅಂಶವಿರುವ ಭಾಗಗಳನ್ನು ಬೇಸರವಾಗದಂತೆ ನಿರ್ವಹಿಸುವ ಕೆಲಸವಾಗಬೇಕು. ತಾತ್ವಿಕಾಂಶಗಳ ಜೊತೆಯಲ್ಲಿ, ನಾಡು - ನುಡಿ - ನೆಲ - ಜಲವನ್ನು ಕುರಿತಿರುವಂತಹ, ರಾಷ್ಟ್ರಭಕ್ತಿ - ದೇಶಭಕ್ತಿಯನ್ನು ಉದ್ದೀಪಿಸಬಲ್ಲ, ಸಾಮಾಜಿಕ ಕಳಕಳಿ ಹೊಂದಿರುವ ಪ್ರಸಂಗಗಳನ್ನು ಕಾವ್ಯಗಳಿಂದ ಹೆಕ್ಕಿ ತೆಗೆದು ಒಟ್ಟುಗೂಡಿಸಿ, ವಿಶೇಷ ರೂಪಕಗಳನ್ನು ಸಾದರಪಡಿಸುವ ಕೆಲಸವಾಗಬೇಕಿದೆ. ಇದು ಗಮಕಗಳಿಗೆ - ಕೇಳುಗರಿಗೆ ಇಬ್ಬರಿಗೂ, ಹೊಸ ಅರಿವನ್ನು ತಂದು ಕೊಡುವ ಪ್ರಯತ್ನವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಮಕ್ಕಳನ್ನು ಕುರಿತಿರುವ, ಮಕ್ಕಳಿಗೆ ಅರ್ಥವಾಗಬಲ್ಲ ಅನೇಕ ಬರಹಗಳು ಕಾವ್ಯ - ಕವಿತೆಯ ರೂಪದಲ್ಲಿ ಕನ್ನಡದಲ್ಲಿವೆ. ಮಕ್ಕಳ ಮುಂದೆ ಇಂಥ ಪ್ರಯತ್ನವನ್ನು ಮಕ್ಕಳಿಂದಲೇ ಮಾಡಿಸಿದರೆ ಸಾಕಷ್ಟು ಪ್ರಯೋಜನಗಳು ಆಗಿಯೇ ತೀರುತ್ತದೆ. ನಮ್ಮ ಸಂಸ್ಕೃತಿಯ ಸಂಸ್ಕಾರ ಅವರ ಮನದಾಳಕ್ಕೆ ಪ್ರವೇಶಿಸುತ್ತದೆ, ಈ ದೆಸೆಯಲ್ಲಿಯೂ ಕಲಾವಿದರು ಕಾರ್ಯ ಪ್ರವೃತ್ತರಾಗಬೇಕು.

**Shikshan Sanshodhan : Journal of Arts, Humanities and Social Sciences** **ISSN(o): 2581-6241**
**Monthly, Peer-Reviewed, Refereed, Indexed Journal** **Impact Factor: 7.384**
**Volume - 8, Issue - 9, September - 2025**

## 3. ಸಮಾರೋಪ

ಗಮಕಲೆ ಹಲವು ಸಾಧ್ಯತೆಗಳನ್ನು ಒಳಗೊಂಡಿರುವ ಸಂಕೀರ್ಣ ಕಲೆ. ಇಲ್ಲಿ ಪ್ರಯೋಜನಶೀಲತೆಗೆ ವಿಪುಲವಾದ ಅವಕಾಶಗಳಿವೆ. ಗಮಕವನ್ನು ನಶಿಸಿ ಹೋಗುವುದಕ್ಕೆ ಬಿಡದೆ, ಸಮರ್ಥ ಮಾಧ್ಯಮವಾಗಿ ಬಳಸಿಕೊಂಡು ಸಂಸ್ಕೃತಿಯನ್ನು ಉಳಿಸಬಹುದು. ಅದಕ್ಕೊಂದಷ್ಟು ಹೊಸ ಬಗೆಯ ಸೃಜನಶೀಲ ಲೇಪನ ಬೇಕಷ್ಟೇ. ಚಿಂತಿಸಿದಷ್ಟು ಹೊಸ ಆಯಾಮಗಳು ದೊರಕುತ್ತಾ ಹೋಗುವುದೇ ಗಮಕದ ವಿಶೇಷ, ವೈಶಿಷ್ಟ್ಯ. ಕನ್ನಡದ ಶ್ರೀಮಂತಿಕೆ - ಈ ನೆಲದ ಸಂಸ್ಕಾರ - ಅದ್ಭುತವಾದ ಪರಂಪರೆ - ಗಮಕಲಾ ಕ್ಷೇತ್ರಕ್ಕಿರುವುದರಿಂದ, ಗಮಕಿಗಳೆಲ್ಲ ಒಟ್ಟಾಗಿ ಸೇರಿ ನಿರಂತರವಾದ ಸುಂದರ ಸೃಜನಶೀಲ ಕೃತಿಗಳನ್ನು ಸಹೃದಯರ ಮುಂದಿಡಬೇಕು. ಭಾಷೆ - ಭಾವ - ಅನುಭವ - ಅನುಭಾವಗಳನ್ನು ನಮ್ಮ ಹಿರಿಯರಂತೆ - ನಾವೂ ಉಳಿಸಿ - ಬೆಳೆಸಿ ಮುಂಬರುವ ನಮ್ಮ ನಾಡ ಮಕ್ಕಳಿಗೆ ಕೊಡುಗೆಯಾಗಿ ನೀಡಬೇಕಾಗಿದೆ.

## ಪರಾಮರ್ಶನ ಗ್ರಂಥಗಳು :

೧. ಕಾವ್ಯಗಾಯನ ಕಲಾಸಂಗ್ರಹ, ಎಂ. ರಾಘವೇಂದ್ರರಾಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೫೯
೨. ಗಮಕ ಪ್ರಬಂಧ ಮಂಜರಿ, ಕೆ.ಟಿ.ರಾಮಸ್ವಾಮ್ಯೆಯಂಗಾರ್, ಮೋಹನ ಪ್ರಕಾಶನ, ಮೈಸೂರು, ೧೯೭೨
೩. ಗಮಕ ಕಲೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೪
೪. ಗಮಕರತ್ನ, (ಸಂ) ಜಿ.ಜಿ. ಮಂಜುನಾಥನ್, ಕೆ. ವೆಂಕಟಸುಬ್ಬಯ್ಯ ಅಭಿನಂದನ ಸಮಿತಿ, ಮೈಸೂರು, ೧೯೮೪
೫. ಸಾಹಿತ್ಯದ ಚತುರ್ಮುಖರು, ಆರ್. ಶಂಕರನಾರಾಯಣ್, ಎನ್.ರಂಗನಾಥ ಶರ್ಮಾ, ಸತ್ಯಶ್ರೀ ಪ್ರಕಾಶನ, ಬೆಂಗಳೂರು, ೧೯೯೩
೬. ತುಂಗ – ಭದ್ರ, (ಸಂ) ರಾಜಾರಾಮಮೂರ್ತಿ, ಗಮಕ ಕಲಾ ಪರಿಷತ್, ಹೊಸಹಳ್ಳಿ, ೧೯೯೪
೭. ಗಮಕಸಿರಿ (ಸ್ಮರಣಸಂಚಿಕೆ), ಕರ್ನಾಟಕ ಗಮಕ ಕಲಾ ಪರಿಷತ್ತು, ಬೆಂಗಳೂರು, ೧೯೯೭
೮. ಗಮಕ ಧಾರಾ, (ಸ್ಮರಣಸಂಚಿಕೆ), ಸ್ವಾಗತಸಮಿತಿ, ಅಖಿಲ ಕರ್ನಾಟಕ ೬ನೇ ಗಮಕಕಲಾ ಸಮ್ಮೇಳನ, ಚಿಕ್ಕಮಗಳೂರು, ೨೦೦೧
೯. ಗಮಕವರ್ಷಿಣಿ, (ಸಂ) ಬೆಳವಾಡಿ ಮಂಜುನಾಥ, ಜಿಲ್ಲಾ ಗಮಕಕಲಾ ಪರಿಷತ್ತು, ಚಿಕ್ಕಮಗಳೂರು, ೨೦೧೩
೧೦. ಗಮಕ ರಸೋಲ್ಲಾಸ, ಕರ್ನಾಟಕ ಗಮಕ ಕಲಾ ಪರಿಷತ್ತು, ಬೆಂಗಳೂರು, ೨೦೧೫